# ಬಸವಕಲ್ಯಾಣ ಅಂತಾರಾಷ್ಟ್ರೀಯ ಸ್ಥಳವಾಗಲಿ



**ಬಸವಕಲ್ಯಾಣದ ಅನುಭವ ಮಂಟಪ ಪರಿಸರದಲ್ಲಿ ಹಮ್ಮಿಕೊಳ್ಳಲಾದ 44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಸಮಾರಂಭವನ್ನು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಶನಿವಾರ ಉದ್ಘಾಟಿಸಿದರು. ಮಂತ್ರಿಗಳಾದ ಈಶ್ವರ ಖಂಡ್ರೆ, ರಹೀಂ ಖಾನ್ ಮತ್ತಿತರರಿದ್ದರು.**

**ಬಸವಕಲ್ಯಾಣ (ಬೀದರ್ ಜಿ.):** ಬಸವಕಲ್ಯಾಣ ಅಂತಾರಾಷ್ಟ್ರೀಯ ಪ್ರೇಕ್ಷಣೀಯ ಸ್ಥಳವಾಗಬೇಕು. ಮಂತ್ರಿಗಳಾದ ಈಶ್ವರ ಖಂಡ್ರೆ, ರಹೀಂ ಖಾನ್ ಹಾಗೂ ಎಲ್ಲಾ ಶಾಸಕರು ಸಚಿವ ಸಂಪುಟದಲ್ಲಿ ಈ ವಿಷಯ ಕುರಿತು ಚರ್ಚಿಸಿ ಈ ಕಾರ್ಯ ಮಾಡಿದರೆ ನಾಡಿಗೆ ಒಂದು ದೊಡ್ಡ ಕೊಡುಗೆ ಕೊಟ್ಟಂತಾಗುತ್ತದೆ ಹಾಗೂ ಅವರ ಹೆಸರು ಶಾಶ್ವತವಾಗಿ ಉಳಿಯುತ್ತದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿಯ ಹೊರವಲಯದ ವಿಶ್ವ ಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಪರಿಸರದಲ್ಲಿ ಶನಿವಾರ ಹಮ್ಮಿಕೊಳ್ಳಲಾದ 44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ನಿಮ್ಮೆಲ್ಲರ ಕೆಲಸಕ್ಕೆ ನನ್ನ ಸದಾ ಬೆಂಬಲ ಇರುತ್ತದೆ. ರಾಜ್ಯದಲ್ಲಿ ಎಲ್ಲಿಯಾದರೂ ಒಂದು ಕಡೆ ವಿಮಾನ ನಿಲ್ದಾಣಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವ ಠರಾವು ಕಾರ್ಯಕ್ರಮ ಮೂಲಕ ನಾವು ಮಾಡಬೇಕಾಗಿದೆ ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಬಸವಣ್ಣನವರ ಬಗ್ಗೆ ಪ್ರೀತಿ, ವಿಶ್ವಾಸ ಹೊಂದಿದ್ದಾರೆ. ಅದಕ್ಕಾಗಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣವರ ಭಾವಚಿತ್ರ ಹಾಕುವಂತ ಕಾರ್ಯ ಅವರು ಮಾಡಿದ್ದಾರೆ. ನಾವೆಲ್ಲರೂ ರಾಜಕಾರಣ ದೂರವಿಟ್ಟು ಈ ಅನುಭವ ಮಂಟಪದ ಮತ್ತು ಈ ನಾಡಿನ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದರೆ ದೇಶ ವಿದೇಶಗಳಲ್ಲಿ ಬಸವಕಲ್ಯಾಣದ ಕೀರ್ತಿ ಬೆಳೆಯಲು ಸಾಧ್ಯವಾಗುತ್ತದೆ. ಎಂದರು. ಸುತ್ತೂರಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು, ಶ್ರೀ ಡಾ. ಚೆನ್ನವೀರ ಶಿವಾಚಾರ್ಯರು, ಶ್ರೀ ಡಾ. ಶಿವಾನಂದ ಮಹಾಸ್ವಾಮಿಗಳು, ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ಪಾಟೀಲ್, ಮಂತ್ರಿಗಳಾದ ಈಶ್ವರ ಖಂಡ್ರೆ, ರಹೀಂ ಖಾನ್, ಶಾಸಕ ಶರಣು ಸಲಗರ್, ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಸವರಾಜ ಪಾಟೀಲ್ ಸೇಡಂ ಮತ್ತಿತರರಿದ್ದರು.

## ಸುತ್ತೂರು ಶ್ರೀ ನುಡಿ * 44ನೇ ಶರಣ ಕಮ್ಮಟ, ಅನುಭವ ಮಂಟಪ ಉತ್ಸವಕ್ಕೆ ವಿಧ್ಯುಕ್ತ ಚಾಲನೆ

# '12ನೇ ಶತಮಾನದಲ್ಲಿ ಶರಣರು ಸೇರಿ ಸಂಗಮವಾದ ಸ್ಥಳ ಬಸವಕಲ್ಯಾಣ'

**ಸಂ.ಕ.ಸಮಾಚಾರ ಬಸವಕಲ್ಯಾಣ :** ಬಸವಕಲ್ಯಾಣ ಪುಣ್ಯವಾದ ಸ್ಥಳ. ಬಸವಣ್ಣ, ಅಲ್ಲಂಪ್ರಭು, ಅಕ್ಕಮಹಾದೇವಿ, ಸಿದ್ಧರಾಮಣ್ಣ ಎಲ್ಲರೂ ಸೇರಿ ಸಂಗಮವಾದ ಸ್ಥಳ ಬಸವಕಲ್ಯಾಣವಾಗಿದೆ. ಈ ಸ್ಥಳ 12ನೇ ಶತಮಾನದಲ್ಲಿ ಜಾಗೃತ ಸ್ಥಾನವಾಗಿತ್ತು ಎಂದು ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನುಡಿದರು.

ಇಲ್ಲಿಯ ಹೊರವಲಯದ ಅನುಭವ ಮಂಟಪ ಟ್ರಸ್ಟ್ ಪರಿಸರದಲ್ಲಿ ಶನಿವಾರ ಹಮ್ಮಿಕೊಂಡ 44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಸಮಾರಂಭವನ್ನುದ್ದೇಶಿಸಿ ಅವರು ಆಶೀರ್ವಚನ ನೀಡಿದರು. ಯಾವುದೇ ಸಾಮಾಜಿಕ ಮಾಧ್ಯಮಗಳಿಲ್ಲದಂತಹ ಸಂದರ್ಭದಲ್ಲಿ 900 ವರ್ಷಗಳ ಹಿಂದೆ ಬಸವಕಲ್ಯಾಣದಲ್ಲಿ ನಡೆದ ಸಾಮಾಜಿಕ ಸುಧಾರಣೆ, ಆಧ್ಯಾತ್ಮಿಕ ಚಿಂತನೆ ಭರತ ಖಂಡವನ್ನು ವ್ಯಾಪಿಸಿತು. ಬಸವಣ್ಣನವರು ಅದರ ಕೇಂದ್ರ ಬಿಂದುಗಳಾಗಿ ಇಡೀ ಸಮಸ್ತವನ್ನು ತಮ್ಮತ್ತ ಆಕರ್ಷಿಸಿದಂಥವರು. ಬಸವಣ್ಣನವರ ಬಳಿ ಅಂತಹ ಶಕ್ತಿ ಇತ್ತು.



**ಬಸವಕಲ್ಯಾಣದಲ್ಲಿ ಹಮ್ಮಿಕೊಂಡ 44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶಿವರಾಜ ಪಾಟೀಲ್‌ರಿಗೆ(ಡಾ. ಚನ್ನಬಸವ ಪಟ್ಟದ್ದೇವರು ಅನುಭವ ಮಂಟಪ ಪ್ರಶಸ್ತಿ), ಡಾ. ಬಿ.ವಿ.ಶಿರೂರ್ ಅವರಿಗೆ ಡಾ. ಎಂ.ಎಂ ಕಲಬುರಗಿ ಸಾಹಿತ್ಯ ಸಂಶೋಧನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.**

ಜಗತ್ತಿಗೆ ಮೊದಲ ಪ್ರಜಾಪ್ರಭುತ್ವ ಕೊಟ್ಟದ್ದು ಹಾಗೂ ಪ್ರತಿಯೊಬ್ಬರೂ ಮುಕ್ತವಾಗಿ ಚರ್ಚೆ ಮಾಡಲು ಅವಕಾಶ ಕೊಟ್ಟ ನೆಲ ಬಸವಕಲ್ಯಾಣ. ಸರಳ, ಸುಂದರವಾದ ಬದುಕು ಹೇಗೆ ನಡೆಸಬೇಕೆನ್ನುವುದು ತೋರಿಸಿಕೊಟ್ಟಿದ್ದಾರೆ ಬಸವಣ್ಣನವರು. ನಂಬಿಕೆಗೆ ಪೂರಕವಾದ ಬದುಕು ನಾವು ರೂಪಿಸಿಕೊಳ್ಳಬೇಕಾಗಿದೆ. ದೊಡ್ಡ ಕಟ್ಟಡ ಕಟ್ಟುವುದು ಮುಖ್ಯವಲ್ಲ, ಜನರ ಮನಸ್ಸು ಕಟ್ಟುವ ಕೆಲಸ ವಾಗಬೇಕೆನ್ನುವ ರೀತಿಯಲ್ಲಿ ಬಸವಕಲ್ಯಾಣವಾಗಬೇಕೆನ್ನುವುದು ಬಸವರಾಜ ಪಾಟೀಲ್ ಸೇಡಂ ಅವರ ಸದಾಶಯವಾಗಿದೆ ಎಂದರು. ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಮುಂದಿನ ದಿನಗಳಲ್ಲಿ ಇಡೀ ಭರತ ಖಂಡದಲ್ಲಿಯೇ ಅತ್ಯಂತ ದೊಡ್ಡ ಉತ್ಸವ ಅನುಭವ ಮಂಟಪ ಉತ್ಸವವಾಗಲಿದೆ. ವಿಶ್ವಸಂಸ್ಥೆಯಲ್ಲಿನ ಮೌಲಿಕ ತತ್ವಗಳು ಸೇರಿ ಜಗತ್ತಿನ ಎಲ್ಲಾ ತತ್ವಗಳು ಬಸವಾದಿ ಶರಣರ ವಚನ ಸಾಹಿತ್ಯದಲ್ಲಿವೆ. ಲಿಂಗಾಯತ ಧರ್ಮಿಯರಿಗೆ ಬಸವಣ್ಣ ಹೃದಯವಿದ್ದಂತೆ. ಸರ್ಕಾರ ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕರನ್ನಾಗಿ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ಪಾಟೀಲ್ ಮಾತನಾಡಿ, ಅನುಭವ ಮಂಟಪ ಅಸಾಮಾನ್ಯ ಉತ್ಸವವಾಗಿದೆ. ಸಮಾಜದಲ್ಲಿ ಉತ್ತಮ ಸೇವೆ ಸಲ್ಲಿಸುವವರನ್ನು ಗುರುತಿಸುವ ಕೆಲಸವಾಗಬೇಕಾಗಿದೆ. ನಮ್ಮ ಮಾತೇ ಸಾಧನೆಯಾಗಬಾರದು. ಸಾಧನೆಯೇ ಮಾತಾಗಬೇಕು ಎಂದು ಹೇಳಿದರು.

ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಸವರಾಜ ಪಾಟೀಲ್ ಸೇಡಂ ಮಾತನಾಡಿದರು. ಶ್ರೀ ಡಾ. ಚೆನ್ನವೀರ ಶಿವಾಚಾರ್ಯರು, ಶ್ರೀ ಡಾ. ಶಿವಾನಂದ ಮಹಾಸ್ವಾಮಿಗಳು, ಶ್ರೀ ಗುರುಬಸವ ಪಟ್ಟದ್ದೇವರು, ವಿ. ಸಿದ್ಧರಾಮ ಶರಣರು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಂತ್ರಿಗಳಾದ ಈಶ್ವರ ಖಂಡ್ರೆ, ರಹೀಂ ಖಾನ್, ಶಾಸಕ ಶರಣು ಸಲಗರ್, ಡಾ. ಬಿ.ವಿ.ಶಿರೂರ್, ಸೋಮನಾಥ ಪಟ್ನೆ, ಐಪಿಎಸ್ ಸಂದೀಪ ಪಾಟೀಲ್, ಐ.ಎಫ್.ಎಸ್ ಆರ್.ಕೆ.ಸೂಗುರು, ಎಮ್‌ಎಲ್‌ಸಿಗಳಾದ ಚಂದ್ರಶೇಖರ ಪಾಟೀಲ್, ಭೀಮರಾವ ಪಾಟೀಲ್, ಜಿಪಂ ಸಿಇಓ ಎಂ ಶಿಲ್ಪಾ, ಮುಖಂಡರಾದ ಬಸವರಾಜ ಬುಳ್ಳಾ, ಬಾಬು ಹೊನ್ನಾನಾಯಕ, ಬಾಬು ವಾಲಿ, ಬಸವರಾಜ ಧನ್ನೂರ್, ಗುರುನಾಥ ಕೊಳ್ಳೂರ್, ಬಿಡಿಪಿಸಿ ಅಧ್ಯಕ್ಷ ಶಶಿಕಾಂತ, ಬಿಡಿಪಿಸಿ ಅಧ್ಯಕ್ಷ ಬಸವರಾಜ ಕೋರಕೆ, ಅನುಭವ ಮಂಟಪ ಟ್ರಸ್ಟ್ ಉಪಾಧ್ಯಕ್ಷ ವೈಜನಾಥ ಕಾಮಶೆಟ್ಟಿ, ಧನರಾಜ ತಾಳಂಪಳ್ಳಿ, ನೀಲಕಂಠ ರಾಠೋಡ, ಸಂಗೀತಾ ಸುಜೀತ ಪಾಟೀಲ್ ಮತ್ತಿತರಿದ್ದರು.

> ಬಸವಣ್ಣನವರು ಜಗತ್ತಿಗೆ ಜ್ಯೋತಿ ಸ್ವರೂಪ, ವಿಭೂತಿ ಪುರುಷರಾಗಿದ್ದಾರೆ. ಇವರ ತತ್ವಾದರ್ಶಗಳು ಕರ್ನಾಟಕ ಬಿಟ್ಟು ಜಗತ್ತಿನಾದ್ಯಂತ ಹರಡಿದ್ದರೆ ಇಂದು ಯುದ್ಧದಂತಹ ಅನಿಷ್ಟ ಘಟನೆಗಳು ನಡೆಯುತ್ತಿರಲಿಲ್ಲ.
>
> ■ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು.

Kalaburgi Edition

ಕನ್ನಡಪ್ರಭ

# ಬಸವಣ್ಣನವರ ತತ್ವದಂತೆ ನಡೆದರೆ ವಿಶ್ವವನ್ನೆ ಬೆಳಗ ಬಲ್ಲಿರಿ

## ಡಾ. ಚನ್ನಬಸವ ಪಟ್ಟದ್ದೇವರು ಅನುಭವಮಂಟಪ ಪ್ರಶಸ್ತಿ ಸ್ವಿಕರಿಸಿದ ನ್ಯಾ. ಶಿವರಾಜ ಪಾಟೀಲ್

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಬಸವಣ್ಣನವರ ಬಗ್ಗೆ ಬಹಳಷ್ಟು ಜನರು ಮಾತನಾಡುತ್ತಾರೆಆದರೆನಿಜಜೀವನದನಡೆಯಲ್ಲಿ ತರೋಲ್ಲ ಹಾಗಾಗಿ ಮಾತೇ ಸಾಧನೆ ಆಗಬಾರದು ಸಾಧನೆ ಮಾತಾಗಬೇಕು ಎಂದು ಸುಪ್ರೀಂಕೋರ್ಟ್‌ನನಿವೃತ್ತನ್ಯಾ.ಶಿವರಾಜಪಾಟೀಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿನ ಅನುಭವ ಮಂಟಪ ಪರಿಸರದಲ್ಲಿ ಆಯೋಜಿಸಲಾಗಿದ್ದ44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನ ಡಾ.ಚನ್ನಬಸವ ಪಟ್ಟದ್ದೇವರು ಅನುಭವಮಂಟಪ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಎಲ್ಲರ ದೃಷ್ಟಿಕೋನ ವಿಶಾಲವಾಗಲು ವಚನ ಸಾಹಿತ್ಯ ಪಾಲಿಸಬೇಕು. ನಮ್ಮ ದೇಶದ ಮಹಾಪುರಷರಿಗೆ ಬಸವಣ್ಣನವರು ಆದರ್ಶ ಪುರುಷ. ನಾವು ವಚನಗಳನ್ನು ಓದಿದರೆ ಸಾಲದು ಅದರಂತೆ ನಡೆಯಬೇಕು ಎಂದರು.

ಪ್ರಸಕ್ತ ಸಾಲಿನ ಡಾ.ಎಂಎಂ ಕಲಬುರಗಿ ಸಾಹಿತ್ಯ ಸಂಶೋಧನಾ ರಾಷ್ಟ್ರೀಯ ಪ್ರಶಸ್ತಿಯನ್ನು ಡಾ.ಬಿ.ವಿ.ಶಿರೂರ ಅವರಿಗೆ ಪ್ರದಾನ ಮಾಡಲಾಯಿತು. ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ ಪುರಸ್ಕೃತ ಜಿಲ್ಲೆಯ ಮೂಲದ ಹಿರಿಯ ಐಪಿಎಸ್ ಅಧಿಕಾರಿ ಸಂದೀಪ ಪಾಟೀಲ್ ಮತ್ತು ಐಎಫ್‌ಎಸ್ ಅಧಿಕಾರಿಆರ್‌ಕೆಸೂಗುರುಅವರಿಗೆವಿಶೇಷಸನ್ಮಾನ ಮಾಡಿ ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

**ಬಸವರತ್ನ ರಾಷ್ಟ್ರೀಯ ಪ್ರಶಸ್ತಿ ಘೋಷಣೆ:** ಇದೇ ಸಂಧರ್ಭದಲ್ಲಿ ಅನುಭವ ಮಂಟಪ ಉತ್ಸವಕಾರ್ಯಕ್ರಮದಲ್ಲಿಮುಂದಿನವರ್ಷದಿಂದ ಬಸವ ರತ್ನ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಬೇಕು ಈ ಪ್ರಶಸ್ತಿಯು 1 ಲಕ್ಷ ರು. ನಗದು ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡಿರುತ್ತದೆ. ಇದಕ್ಕೆ ಬೇಕಾದ ಹಣವನ್ನು ಹಾರಕೂಡ ಹಿರೇಮಠ ಸಂಸ್ಥಾನದಿಂದ ನೀಡಲಾಗುವುದು ಎಂದು ಡಾ. ಚೆನ್ನವೀರ ಶಿವಚಾರ್ಯರು ಘೋಷಿಸಿದರು.

**ಡಾ.ಚನ್ನಬಸವಪಟ್ಟದ್ದೇವರುಅನುಭವಮಂಟಪ ಪ್ರಶಸ್ತಿ:** ಡಾ.ಚನ್ನಬಸವ ಪಟ್ಟದ್ದೇವರು ಅನುಭವ ಮಂಟಪ ಪ್ರಶಸ್ತಿಯು 1 ಲಕ್ಷ ರು. ನಗದು, ಪ್ರಶಸ್ತಿ ಫಲಕ ಒಳಗೊಂಡಿದ್ದು, ಇದನ್ನು ಭಾಲ್ಕಿಯ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಸುಪ್ರಿಂಕೋರ್ಟ‌ನಿವೃತ್ತನ್ಯಾ.ಶಿವರಾಜಪಾಟೀಲ್ ಅವರಿಗೆ ಪ್ರದಾನ ಮಾಡಿದರು.

ಡಾ.ಎಂಎಂ ಕಲಬುರಗಿ ಸಾಹಿತ್ಯ ಸಂಶೋಧನಾ ರಾಷ್ಟ್ರೀಯ ಪ್ರಶಸ್ತಿ 50 ಸಾವಿರ ರು. ನಗದು ಪ್ರಶಸ್ತಿ ಫಲಕ ಒಳಗೊಂಡಿದೆ ಇದರ ದಾನಿಗಳು ಉದ್ಯಮಿ ಬಸವರಾಜ ಧನ್ನೂರ ಅವರಾಗಿದ್ದು, ಪ್ರಶಸ್ತಿಯನ್ನು ಡಾ.ಬಿ.ವಿ.ಶಿರೂರಅವರಿಗೆಪ್ರದಾನಮಾಡಿದರು. ಈ2 ಪ್ರಶಸ್ತಿಗಳನ್ನುಒಂದೇವೇದಿಕೆಯಲ್ಲಿಏಕಕಾಲಕ್ಕೆ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ಬಸವಗುರು ಪೂಜೆಯನ್ನು ಜಿಲ್ಲಾಧಿಕಾರಿ ಗೋವಿಂದರಡ್ಡಿ ನೆರವೇರಿಸಿದರೆ ಜಿಪಂ ಸಿಇಒ ಶಿಲ್ಪಾ ಎಂ. ವಚನ ಪಠಣ ಮಾಡಿದರು.

ಎಸ್‌ಪಿ ಚನ್ನಬಸವಣ್ಣ ಲಂಗೋಟಿ, ಬಿಕೆಡಿಬಿ ಆಯುಕ್ತ ರಮೇಶ ಕೋಲಾರ, ಸಹಾಯಕ ಆಯುಕ್ತ ಪ್ರಕಾಶ ಕುದರೆ ಇದ್ದರು.



ಕನ್ನಡಪ್ರಭ

# ಸಮಾನತೆ ಕೇಂದ್ರವಾಗಿ ಬಸವಕಲ್ಯಾಣ ಬೆಳೆಯಲಿದೆ

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಬಸವಣ್ಣನವರು ಸಮಾಜ ಸುಧಾರಣೆ ಧರ್ಮ ಚಿಂತನ ಪ್ರಜಾಪ್ರಭುತ್ವದ ಮೌಲ್ಯಗಳ ಬೀಜ ಬಿತ್ತಿದ್ದು, ಇದೇ ಬಸವಕಲ್ಯಾಣದಿಂದ ಹೀಗಾಗಿ ಇದು ವಿಶ್ವದ ಜನರ ಸಮಾನತೆ ಕೇಂದ್ರ ಸ್ಥಾನವಾಗಿ ಬೆಳೆಯಲಿದೆ ಎಂದು ಸುತ್ತೂರಿನ ಜಗದ್ಗುರು ಡಾ. ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನುಡಿದರು.

ಇಲ್ಲಿನ ಅನುಭವ ಮಂಟಪದ ಪರಿಸರದಲ್ಲಿ 44ನೇ ಶರಣಕಮ್ಮಟ ಹಾಗೂ ಅನುಭವ ಮಂಟಪ ಉತ್ಸವದಲ್ಲಿ ದಿವ್ಯ ಸಾನಿಧ್ಯವಹಿಸಿ ಮಾತನಾಡಿ, ಭಕ್ತಿ, ಜ್ಞಾನ, ವೈರಾಗ್ಯದ ಸಮಾಗಮ ಸ್ಥಳ ಬಸವಕಲ್ಯಾಣವಾಗಿದೆ ಎಂದರು.

ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಸೇರಿದಂತೆ 770 ಅಮರಗಣಂಗಳು ನಡೆದಾಡಿದಪುಣ್ಯಸ್ಥಳಬಸವಕಲ್ಯಾಣವಾಗಿದೆ. ಈ ನಗರವು ಜಗತ್ತಿನ ಐತಿಹಾಸಿಕ/ಧಾರ್ಮಿಕ ನಗರಗಳಲ್ಲಿಒಂದಾಗಿ ಬೆಳೆಯಲುಬೇಕಾದಎಲ್ಲಾರೀತಿಯ ಸಹಾಯ ಸಹಕಾರ ನಮ್ಮದಾಗಿರುತ್ತದೆ ಎಂದರು.

**ಯುದ್ಧಗಳಿಗೆ ಪರಿಹಾರ ಬಸವ ವಚನಗಳು, ಭಾಷಾಂತರ ಅಗತ್ಯ:** ಬಸವಣ್ಣನವರ ತತ್ವಗಳು ನುಡಿಯುವುದಕ್ಕಿಂತ ನಡೆಯಲು ಪ್ರೇರಣೆಯಾಗುತ್ತವೆ. ಇದರಿಂದ ಆತ್ಮಶುದ್ಧಿ ವ್ಯಕ್ತಿ ವಿಕಾಸನ ಜೊತೆಗೆ ಕುಟುಂಬ ವಿಕಾಸನಗೊಳ್ಳಲಿದೆ ಹಾಗಾಗಿ ಇಂದು ವಿಶ್ವವು ಅನೇಕ ಸಮಸ್ಸೆಗಳನ್ನು



ಎದುರಿಸುತ್ತಿವೆಅದರಲ್ಲಿಇರಾನ್, ಇರಾಕ್, ರಷ್ಯಾ, ಉಕ್ರೇನ್, ಇಸ್ರೇಲ್, ಹಮಾಸ್ ಯುದ್ಧ ಸನ್ನಿವೇಶಗಳು ಜಗತ್ತನ್ನು ಪ್ರಳಯದ ಅಂತಿಗೆ ತಳ್ಳುತ್ತಿವೆ ಇವರಲ್ಲಿ ನಾ ಹೆಚ್ಚು, ತಾ ಹೆಚ್ಚು ಎಂಬ ಅಹಂಕಾರದಿಂದ 3ನೇ ಮಹಾಯುದ್ಧದ ಸನ್ನಿವೇಶ ನಿರ್ಮಾಣವಾಗಿದೆ ಇವರೆಲ್ಲರ ಸಮಸ್ಯೆಗಳಿಗೆ ಪರಿಹಾರ ದಯವೇ ಧರ್ಮದ ಮೂಲವೆಂಬ ಬಸವಣ್ಣನವರ ವಾಣಿ ಹಾಗೂ ಇವನಾರ ಇವನಾರವ ಎನ್ನದೆ ಇವ ನಮ್ಮವ ಎಂಬ ಕಲ್ಪನೆ ಅವರಿಗೆ ಮುಟ್ಟಿಲ್ಲ ಇದನ್ನು ಮಟ್ಟಿಸಲು ವಚನ ಸಾಹಿತ್ಯ ಭಾಷಾಂತರ ಮಾಡುವ ಕೆಲಸ ಆಗಬೇಕು ಎಂದರು.

ಮಾಜಿ ರಾಜ್ಯಸಭಾ ಸದಸ್ಯ ಬಸವರಾಜ ಪಾಟೀಲ್ ಸೇಡಂ ಮಾತನಾಡಿ, ಬಸವಕಲ್ಯಾಣಕ್ಕೆ ಬರುವ ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಅದಕ್ಕೆ ಬೇಕಾದ ಊಟ ವಸತಿ ಗೈಡ್, ವಾಹನ ಸೌಕರ್ಯ ಮುಂತಾದ ಪೂರಕ ಕೆಲಸಗಳು ಇಲ್ಲಿ ನಡೆಯಬೇಕು ಎಂದರು.

ಗುರುಮಹಾಂತ ಮಹಾಸ್ವಾಮಿಗಳು ಚಿತ್ತರಗಿ ವಿಜಯಮಹಾಂತೇಶ್ವರ ಸಂಸ್ಥಾನ ಮಠ, ಇಳಕಲ್, ಡಾ.ಚನ್ನವೀರಶಿವಾಚಾರ್ಯಸಂಸ್ಥಾನಹಿರೇಮಠ ಹಾರಕೂಡ, ಡಾ.ಶಿವಾನಂದ ಮಹಾಸ್ವಾಮಿಗಳು ಗುರುಬಸವೇಶ್ವರ ಸಂಸ್ಥಾನ ಮಠ ಹುಲಸೂರು, ಸುಪ್ರಿಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ್, ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲಾಉಸ್ತುವಾರಿಸಚಿವಈಶ್ವರಖಂಡ್ರೆ, ಪೌರಾಡಳಿತ ಸಚಿವ ರಹೀಮ್ ಖಾನ್, ಡಾ.ಬಿ.ವಿ.ಶಿರೂರ, ಶಾಸಕರಾದ ಚಂದ್ರಶೇಖರ ಪಾಟೀಲ್, ಭೀಮರಾವಪಾಟೀಲ್ಮತ್ತುಶಶಿಕಾಂತ ದುರ್ಗೆ, ಬಸವರಾಜ ಕೋರಕೆ, ಗುರುನಾಥ ಕೊಳ್ಳೂರ, ಬಸವರಾಜ ಧನ್ನೂರ, ಬಾಬು ವಾಲಿ, ವೈಜಿನಾಥ ಕಾಮಶೆಟ್ಟಿ, ಧನರಾಜ ತಾಳಂಪಳ್ಳಿ, ಅರ್ಜುನ ಕನಕ, ನೀಲಕಂಠ ರಾಠೋಡ, ಆನಂದ ದೇವಪ್ಪ, ಬಾಬು ಹೊನ್ನನಾಯಕ, ಬಸವರಾಜ ಬುಳ್ಳಾ, ಸೋಮನಾಥ ಪಟ್ನೆ, ಸಂದೀಪ ಪಾಟೀಲ್, ಆರ್‌ಕೆ ಸೂಗುರು ಇದ್ದರು.

ಶಾಸಕಶರಣುಸಲಗರಸ್ವಾಗತಿಸಿಪ್ರಾಸ್ತಾವಿಕವಾಗಿ ಮಾತನಾಡಿದರು. ನವಲಿಂಗ ಪಾಟೀಲ ನಿರೂಪಿಸಿ ಅಶೋಕರೆಡ್ಡಿ ನಿಂಗಾವರೆ ವಂದಿಸಿದರು. ಶಿವಕುಮಾರಪಂಚಾಳವಚನಸಂಗೀತನಡೆಸಿಕೊಟ್ಟರೆ ನೂಪುರ ಕಲಾ ತಂಡದಿಂದ ನೃತ್ಯ ರೂಪಕ ನೆರವೇರಿತು.



ಬಸವಕಲ್ಯಾಣದ ಅನುಭವ ಮಂಟಪದ ಪರಿಸರದಲ್ಲಿ ನಡೆದ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಸಮಾರಂಭದಲ್ಲಿ ರಾಷ್ಟ್ರಪತಿ ವಿಶಿಷ್ಮ ಸೇವಾ ಪದಕ ಪುರಸ್ಕೃತ ಸಂದೀಪ ಪಾಟೀಲ್‌ರಿಗೆ ಸತ್ಕರಿಸಲಾಯಿತು.

# ‘ಬಸವಣ್ಣನವರ ಹೆಸರಿನ ಮೇಲೆ ನಡೆದರೆ ನಾಡಿಗೆ ಹೆಸರು’

ಸಂ.ಕ.ಸಮಾಚಾರ



ಬಸವಕಲ್ಯಾಣ : ವಿಶ್ವ ಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಪರಿಸರದಲ್ಲಿ ಹಮ್ಮಿಕೊಳ್ಳಲಾದ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಸಮಾರಂಭದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿದರು.

ಬಸವಕಲ್ಯಾಣ : ಲಿಂಗಾಯತರೆಲ್ಲರೂ ಒಕ್ಕಟ್ಟಿನಿಂದ ಬಸವಣ್ಣನವರ ಹೆಸರಿನ ಮೇಲೆ ಮುಂದುವರೆದರೆ ನಮ್ಮ ನಾಡಿಗೆ ದೊಡ್ಡ ಹೆಸರು ಬರುತ್ತದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಇಲ್ಲಿಯ ಹೊರವಲಯದ ವಿಶ್ವ ಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಪರಿಸರದಲ್ಲಿ ಶನಿವಾರ ಹಮ್ಮಿಕೊಳ್ಳಲಾದ 44ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಮೊಟ್ಟ ಮೊದಲಿಗೆ ಈ ಜಗತ್ತಿಗೆ ಪ್ರಜಾಪ್ರಭುತ್ವದ ಕೊಡುಗೆ ಕೊಟ್ಟ ಕೀರ್ತಿ ಅಲ್ಲಮಪ್ರಭು ಹಾಗೂ ಬಸವಣ್ಣನವರಿಗೆ ಸಲ್ಲುತ್ತದೆ. ಹೊಸ ಸಂಸತ್ತಿನಲ್ಲಿ ಎಲ್ಲಿಯಾದರೂ ಒಂದು ಕಡೆ ಅನುಭವ ಮಂಟಪದ ಹೆಸರು ಬರಬೇಕೆನ್ನುವುದು ನಮ್ಮ ಆಸೆಯಾಗಿದೆ. ಬಸವ ಭೂಮಿ ಬಹಳ ಪವಿತ್ರವಾದ ಸ್ಥಳವಾಗಿದ್ದು, ಜಾತ್ಯಾತೀತ ರಾಷ್ಟ್ರ ನಿರ್ಮಾಣ ಮಾಡಿದವರು ಬಸವಣ್ಣ. ಅವರಿಗೆ ಯಾವುದೆ ಜಾತಿಗಳಿಲ್ಲ. ಪ್ರತಿಯೊಬ್ಬ ವ್ಯಕ್ತಿ ನಮ್ಮವರು ಎಂದು ಜಗತ್ತಿಗೆ ಸಾರಿದ್ದಾರೆ ಎಂದು ಬಣ್ಣಿಸಿದರು. ಬಸವಣ್ಣನವರ ಆಶೀರ್ವಾದದಿಂದ ನನಗೆ ದೊಡ್ಡ ಅಧಿಕಾರ ಸಿಕ್ಕಿದೆ. ಆ ಅಧಿಕಾರದ ಸದುಪಯೋಗ ಪಡೆದುಕೊಂಡು ಬಸವಣ್ಣನವರಿಗಾಗಿ ಸಾಧ್ಯವಾದಷ್ಟು ಸೇವೆ ಮಾಡುತ್ತೇನೆ ಎಂದು ಭರವಸೆ ನೀಡಿದರು. ಪ್ರತಿಯೊಬ್ಬರು ಮೇಣದ ಬತ್ತಿಯಷ್ಟು ಕೆಲಸ ಮಾಡಿದರೆ

ಈ ಬಸವಕಲ್ಯಾಣ ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಲು ಸಾಧ್ಯವಿದೆ. ಇದು ಪವಿತ್ರವಾದ ಸ್ಥಳವಾಗಿದೆ. ಕೇವಲ ರಾಜಕೀಯ ಭಾಷಣ ಮಾಡಿದರೆ ಸಾಧ್ಯವಿಲ್ಲ. ಅದಕ್ಕೆ ಕಾರ್ಯರೂಪಕ್ಕೆ ತರುವಲ್ಲಿ ನಾವೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದು ತಿಳಿಸಿದ ಅವರು ಈ ನಾಡಿಗಾಗಿ ನನ್ನಿಂದ ಸಾಧ್ಯವಾದಷ್ಟು ಅಳಿಲು ಸೇವೆ ಸಲ್ಲಿಸುತ್ತೇನೆ ಎಂದು ಹೇಳಿದರು. ಜಿಲ್ಲಾಧಿಕಾರಿ ಗೋವಿಂದ್ ರೆಡ್ಡಿ ಬಸವ ಗುರುಪೂಜೆ ಸಲ್ಲಿಸಿದರು. ಎಸ್‌ಪಿ ಚನ್ನಬಸವಣ್ಣ ಲಂಗೋಟಿ ಮತ್ತಿತರಿದ್ದರು.